ದಿನಾಂಕಃ 20.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃವಾದಿ ಪರ ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಸದರಿ ದಾವೆಯಲ್ಲಿರುವ ದಾವಾ ಸ್ವತ್ತು ಸರ್ವೆ ನಂ.19/9 ರಲ್ಲಿ ನನಗೆ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತಿನ ಚಕ್ಕು ಬಂಧಿ ಸರಿ ಇಲ್ಲ. ಸರ್ವೆ ನಂ.19/9 ರ ಚಕ್ಕು ಬಂಧಿ ನನಗೆ ಹೇಳಲು ಬರುವುದಿಲ್ಲ. ಸದರಿ ಜಮೀನು ಮೂಲತಃ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ಬೇವಿನಹಳ್ಳಿ ಗ್ರಮದರಮ ಎಂದರೆ ನನಗೆ ಗೊತ್ತಿಲ್ಲ. ಅವರ ಕುಟುಂಬದವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನಲ್ಲಿ 2 ಕಟ್ಟಡಗಳು ಇವೆ ಎಂದರೆ ಸರಿ. ನನಗೆ ನಮ್ಮ ಮನೆ ಇರುವ ಜಾಗದ ಸರ್ವೆ ನಂ. ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಾಗ 1990 ರಲ್ಲಿ ನಮಗೆ ಮಂಡಲ್ ಪಂಚಾಯಿತಿ ಯವರು ಗ್ರಾಮ ಠಾಣದಲ್ಲಿ ಸದರಿ ಜಾಗವನ್ನು ಕೊಟ್ಟಿರುತ್ತಾರೆ. ನನಗೆ ನೀಡಿದ ಹಕ್ಕು ಪತ್ರದಲ್ಲಿ ಇರುವ ಚಕ್ಕು ಬಂಧಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ- ರಸ್ತೆ, ಪಶ್ಚಿಮಕ್ಕೆ- ನಮ್ಮ ಜಮೀನಿನ ಉಳಿಕೆ ಜಾಗ, ಉತ್ತರಕ್ಕೆ- ರಸೂಲ್ ಸಾಬ್ ರವರ ನಿವೇಶನ ಮತ್ತು ದಕ್ಷಿಣಕ್ಕೆ- ಕರಿಯಣ್ಣರವರ ಮನೆ ಇರುತ್ತದೆ. ನಾನು ಕಟ್ಟಿರುವ ಮನೆಯ ಉತ್ತರಕ್ಕೆ- ರಸೂಲ್ ಸಾಬ್ ರವರ ನಿವೇಶನವಿರುತ್ತದೆ. ಹಕ್ಕು ಪತ್ರದ ಪ್ರಕಾರ ನಾನು ಕಟ್ಟಿರುವ ಮನೆ ದಾವಾ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯರ ಹಕ್ಕು ಮತ್ತು ಮಾಲಿಕತ್ವದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಸದರಿ ಸ್ವತ್ತಿನಲ್ಲಿ 36 ವರ್ಷದಿಂದ ವಾಸವಿದ್ದೇವೆ ಎಂದು ನುಡಿದಿರುತ್ತಾರ. ದಾವಾ ಸ್ವತ್ತಿನಲ್ಲಿರುವ ಕಟ್ಟಡಗಳು ವಾದಿಗಳು ಕಟ್ಟಿದ್ದವುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲೈಸೆನ್ಸ್ ಪಡೆದುಕೊಂಡು ನನ್ನ ತಂದೆಯವರು ಮನೆಯನ್ನು ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಇರುವ ಒಂದು ಮನೆಯಲ್ಲಿ ನಾವು ವಾದಿಯವರ ಅನುಮತಿಯನ್ನು ಪಡೆದು ವಾಸವಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಪಟ್ಟಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಅವರಿಗೆ ಸೇರಿರುವ ಮನೆಯನ್ನು ಬಿಟ್ಟು ಕೊಡುತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.